ಶ್ರೀ ಜಿ. ಬಸವಣಪ್ಪ.—ಸರ್ಕಾರಿ ಅಜ್ಞೆ ಬಂದಿದೆ. ಆದರ ಪ್ರಕಾರವಾಗಿ ಈಗ ಮಾಡಲಾಗುತ್ತಿದೆ, ಆದುದರಿಂದ ಈಗ ಹೊರಗಡೆ ತೆಗೆದುಕೊಂಡು ಹೋಗುವುದನ್ನು ತಡೆಗಟ್ಟಬೇಕಾಗಿದ್ದರೆ ಅದಕ್ಕೊಂದು ತಿದ್ದುಪಡಿಯನ್ನು ತರಬೇಕಾಗಿದೆ. ಅದಕ್ಕಾಗಿ ನಾವು ಕೇಂದ್ರ ಸರ್ಕಾರದವರಿಗೆ ಈಗಾಗಲೇ ಪತ್ರವನ್ನು ಬರೆದಿದ್ದೇವೆ. ಆದರಿಂದ ಅನುಮತಿ ಇವತ್ತು ನಾಳೆ ಬರಬಹುದು ಬಂದ ಕೂಡಲೇ ಅದಕ್ಕೊಂದು ತಿದ್ದುಪಡಿಯನ್ನು ಈ ಶಾಸನ ಸಭೆಯಲ್ಲಿಯೇ ತರುತ್ತೇವೆ.

ಡಾ. ವಿ. ಎಸ್ ಆಚಾರ್.—ಗಮನ ಸೆಳೆದು ಈ ವಿಷಯವನ್ನು ಇಷ್ಟಕ್ಕೇ ಮುಗಿಸುವುದಾದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ ನಾವು ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡಲು ತಾವು ಅವಕಾಶವನ್ನು ಮಾಡಿಕೊಡಬೇಕು ಏತಕ್ಕೆಂದರೆ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು ಮಿಲ್ ಪಾಯಿಂಟ್ ಎಂದೂ ಏನೇನೋ ವಿಷಯವನ್ನು ಹೇಳುತ್ತಿದ್ದಾರೆ. ಇದರಿಂದ ನಮ್ಮ ಪ್ರಶ್ನೆ ಇತ್ಯರ್ಥವಾಗುವುದಿಲ್ಲ.

ಅಧ್ಯಕ್ಷರು.—ಚರ್ಚೆಯಾಗಬೇಕೆಂದರೆ ಇವತ್ತು ಆಗುವುದಿಲ್ಲ. ಚರ್ಚೆಯಾಗಬೇಕೆಂದು ಹೇಳಿ ಮಾನ್ಯ ಬಂಗಾರಪ್ಪ ಮಂತ್ರಿತರ ಸ್ನೇಹಿತರು ಸಹ ಹೇಳಿದ್ದಾರೆ ಅದರ ಬಗ್ಗೆ ಆಲೋಚನೆ ಮಾಡೋಣವೆಂದು ಹೇಳಿ

ಶ್ರೀ ಎಸ್. ಸೂರ್ಯನಾರಾಯಣ ರಾವ್.—ರೇಷನ್ ಪದ್ಧತಿ ಇರುವುದು ಕೇವಲ ಬೆಂಗಳೂರು ನಗರದಲ್ಲಿ ಮಾತ್ರ ಆದರೆ ಹೊರವಲಯದಲ್ಲಿ ಲಕ್ಷ ಗಟ್ಟಲೆ ಜನ ಪಡಿತರ ಪದ್ಧತಿ ಇಲ್ಲದೇ ಇರುವುದರಿಂದ ಬಹಳ ತೊಂದರೆ ಪಡುತ್ತಿದ್ದಾರೆ ಮತ್ತು ಅವರಿಗೆ ಜವಿನು ಸಹ ಇಲ್ಲ ಇದರ ಬಗ್ಗೆ ರೇಷನ್ ಪದ್ಧತಿಯನ್ನು ತಲ್ಲಿಗೂ ಸಹ ಅನ್ವಯಿಸುವುದಕ್ಕೆ ಆಗುವುದಿಲ್ಲವೇ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ಬಸವಣಪ್ಪ.—ಬೆಂಗಳೂರು ನಗರ ಒಂದಕ್ಕೇ ಮಾತ್ರವಲ್ಲ ಗ್ರಾಮಾಂತರ ಪ್ರದೇಶಗಳಲ್ಲಿ ರತಕ್ಕವರಿಗೂ ನಾವು ಕೊಡುತ್ತೀದ್ದೇವೆ ಆದರೆ ದೊಡ್ಡ ಪ್ರಮಾಣದಲ್ಲಿ ಅಲ್ಲದಿದ್ದರೂ ಸ್ವಲ್ಪಮಟ್ಟಿಗಾದರೂ ಕೊಡುತ್ತಿದ್ದೇವೆ,

ಡಾ. ವಿ ಎಸ್. ಆಚಾರ್ಯ.—ಇವರ ಬಗ್ಗೆ ಸಂಪೂರ್ಣವಾದ ಚರ್ಚೆಯಾಗುವುದು ಒಳ್ಳೆಯದು.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಕೂಲಿ ೪ ರೂಪಾಯಿ ಇದ್ದು ಅಕ್ಕಿ ಬೆಲೆ ೬ ರೂಪಾಯಿ ಆಗಿದ್ದರೆ ಅವನು ಹೇಗೆ ಬದುಕುವುದಕ್ಕೆ ಸಾಧ್ಯ ಸ್ವಾಮಿ, ಆದುದರಿಂದ ಇದರ ಬಗ್ಗೆ ಚರ್ಚೆ ಮಾಡಲು ತಾವು ಅವಕಾಶವನ್ನು ಮಾಡಿಕೊಡಬೇಕು.

ಡಾ. ವಿ. ಎಸ್. ಆಚಾರ್ಯ.—ಗಮನ ಸೆಳೆಯುವ ಪ್ರಶ್ನೆಗೆ ಹೇಳಿಕೆಯನ್ನು ಕೊಟ್ಟರೆ ಈ ಪ್ರಶ್ನೆ ಮುಗಿಯುವುದಿಲ್ಲ ಆದುದರಿಂದ ಇದರ ಬಗ್ಗೆ ಸಂಪೂರ್ಣವಾದ ಚರ್ಚೆಯಾಗಬೇಕಾಗಿದೆ.

ಅಧ್ಯಕ್ಷರು.—ಚರ್ಚೆಯಾಗಬೇಕೆಂದು ತಾವು ಹೇಳುತ್ತಿದ್ದೀರಿ. ಸರ್ಕಾರದಪರ ಜೊತೆಯಲ್ಲಿ ಮಾತನಾಡಿ ಬಿ. ಎ. ಸಿ. ಯಲ್ಲಿ ಇದನ್ನು ಇಟ್ಟು ಅದಕ್ಕೆ ಕಾಲವನ್ನು ನಗದಿ ಮಾಡುತ್ತೇನೆ. ಅನಂತರ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡೋಣ.

(ii) ಕೃಷ್ಣರಾಜಪೇಟೆ ವಿುತಿ ಗ್ರಾಮದಲ್ಲಿ ಹರಿಜನರ ಮೇಲೆ ನಡೆದ ಹಲ್ಲೆ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಸಂಬಂಧಪಟ್ಟ ಸಚಿವರು ಸದನದಲ್ಲಿ ಇಲ್ಲ.

ಶ್ರೀ ಎ, ಲಕ್ಷ್ಮೀಸಾಗರ್.—ಮೇಲ್ ಮನೆಗೆ ಮಾನ್ಯ ಸಚಿವರು ಹೋಗಿದ್ದಾರೆ ಅದುದರಿಂದ ಇದನ್ನು ಮುಂದಕ್ಕೆ ಹಾಕಬಹುದು.

ಅಧ್ಯಕ್ಷರು.—ಮುಂದಕ್ಕೆ ಹಾಕತಕ್ಕ ಸಂಪ್ರದಾಯವಿಲ್ಲ. ದಯವಿಟ್ಟು ಕ್ಷಮಿಸಿ. ಈಗ ವಿಧೇಯಕಗಳನ್ನು ಮುಂಡಿಸುವುದು.